MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | TUESDAY | 10-1-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಪಾಮೆಣ್ಣೆ ದರ ಮತ್ತೆ ಏರಿಕೆ

3 ದಿನಗಳ ದರ ಇಳಿಕೆಯಿಂದ ಮಲೇಶೀಯನ್ ಪಾಮೆಣ್ಣೆ ಫ್ಯೂಚರ್ ದರ ಮತ್ತೆ ಗಳಿಕೆಯತ್ತ ಹೊರಳಿದೆ. ಫ್ಯೂಚರ್ ದರ 1.6 ಶೇಕಡಾ ಹೆಚ್ಚಳ (65 ರಿಂಗಿಟ್ಸ್) ಗೊಂಡು ಟನ್‌ಗೆ 4117 ರಿಂಗಿಟ್ಸ್($ 941.46) ಗಳಾಗಿವೆ. MPDB ದತ್ತಾಂಶದಂತೆ ಡಿಸೆಂಬರ್ ತಿಂಗಳ ಅಂತ್ಯದ ಮಲೇಶಿಯನ್ ಪಾಮೆಣ್ಣೆ ದಾಸ್ತಾನು 4.19 ಶೇಕಡಾ ಇಳಿಕೆಯಾಗಿ 2.19 ಮಿಲಿಯನ್ ಟನ್‌ಗಳಾಗಿವೆಯೆನ್ನಲಾಗಿದೆ.

## 2022 ರ ಗೋಡಂಬಿ ರಫ್ತು ಗುರಿ ಮುಟ್ಟಲಾರದ ವಿಯೆಟ್ನಾಂ

3.2 ಬಿಲಿಯನ್ ಡಾಲರ್ ಬೆಲೆಯ ಗೋಡಂಬಿ ತಿರುಳು ರಫ್ತು ಗುರಿಯನ್ನು 2022 ಕ್ಕೆ ಅನ್ವಯಿಸಿ ವಿಯೆಟ್ನಾಂ ನಿಗದಿಗೊಳಿಸಿತ್ತು. ಆದರೆ ವಿಯೆಟ್ನಾಂಗೆ 3.07 ಬಿಲಿಯನ್ ಡಾಲರ್ ಬೆಲೆಯ ಗೋಡಂಬಿ ರಫ್ತು ಮಾಡಲು ಮಾತ್ರ ಸಾಧ್ಯವಾಗಿ 600 ಮಿಲಿಯನ್ ಡಾಲರ್ ಬೆಲೆಯಷ್ಟು ರಫ್ತು ಹಿನ್ನಡೆಯನುಭವಿಸಿತ್ತು. ಜಾಗತಿಕ ಆರ್ಥಿಕ ಮಂದಗತಿ, ಚೈನಾದ ಶೂನ್ಯ ಕೋವಿಡ್ ನೀತಿ ಇವುಗಳಿಂದ ರಫ್ತು ಹಿನ್ನಡೆಯಾಗುತ್ತೆನ್ನಲಾಗಿದೆ. 2023 ಕ್ಕೆ 3.1 ಬಿಲಿಯನ್ ಡಾಲರ್ ಗೋಡಂಬಿ ರಫ್ತು ವಿಯೆಟ್ನಾಂ ನಿಗದಿಗೊಳಿಸಿದೆಯೆನ್ನಲಾಗಿದೆ. 2022 ರಲ್ಲಿ ರಫ್ತು ವಿನಿಮಯ ಮಾರಾಟ ದರವೂ ಇಳಿಕೆಯ ಮಟ್ಟದಲ್ಲಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ ರಫ್ತು ದರ ಗಣನೀಯ ಇಳಿಕೆಯಾಗಿದೆ ಹಾಗೂ ಕಚ್ಚಾ ಗೋಡಂಬಿ ದರ ಹಿಂದನಷ್ಟೇ ಇದೆಯೆನ್ನಲಾಗಿದೆ. ಈ ವರ್ಷ ಆರಂಭ ರಫ್ತು ಕರಾರು ಸಾಮಾನ್ಯಕ್ಕೆ 10 ನೇ ಒಂದಂಶಕ್ಕೆ ಇಳಿಕೆಯಾಗಿದೆಯೆನ್ನಲಾಗಿದೆ.